ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ, (ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 10 ಚಾ ಸಾ 4

ಹೆಸರುಃ ಸೀತಾ

ಗಂಡನ ಹೆಸರುಃ ಲಾಲು

ವಯಸ್ಸುಃ 30 ವರ್ಷ

ಉದ್ಯೋಗಃ ಗೃಹಿಣಿ

ವಾಸಃ ಕೆ.ಆರ್.ಸಾಗರ.

ದಿಃ 12.12.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನನ್ನ ಚಿಕ್ಕಪ್ಪ ಗಂಗಾರಾಮ್ ಲಕ್ಷಿಯನ್ನು ಮದುವೆಯಾಗಿರುತ್ತಾನೆ, ಸದರಿ ಲಕ್ಷ್ಮಿ ಈಗ ಮೃತಪಟ್ಟಿದ್ದಾಳೆ. ನಾನು ಮುಂಬೈನ ನಿವಾಸಿ.

2. ನಾನು ಲಾಲು ರವರನ್ನು 10 ವರ್ಷದ ಹಿಂದೆ ಮದುವೆಯಾಗಿದ್ದು ಆನಂತರದಲ್ಲಿ ಕೆ.ಆರ್. ಎಸ್ ನ ಬಜಾರ್ ಲೈನ್ ನಲ್ಲಿ ವಾಸವಿದ್ದೇನೆ. ನನಗೆ ಇಬ್ಬರು ಮಕ್ಕಳಿದ್ದಾರೆ.

3. ನನ್ನ ಮನೆಯ ನಂತರದ ಐದು ಮನೆ ಆದ ನಂತರದಲ್ಲಿ ಗಂಗಾರಾಮ್ ನ ಮನೆ ಇದೆ. ಚಾ ಸಾ 1 ಲಕ್ಷ್ಮಿ ನನಗೆ ಗೊತ್ತಿರುತ್ತಾರೆ. ಸದರಿ ಲಕ್ಷ್ಮಿ ಮೃತ ಲಕ್ಷಿಯ ಮನೆಯ ಪಕ್ಕದ ಮನೆಯಲ್ಲಿ ತನ್ನ ಸಂಸಾರದ ಜೊತೆಯಲ್ಲಿ ವಾಸವಿದ್ದಾಳೆ.

4. ನಾನು, ಚಾ ಸಾ 1 ಲಕ್ಷ್ಮಿ ಮತ್ತು ಮೃತ ಲಕ್ಷ್ಮಿ ತುಂಬಾ ಅನ್ಯೋನ್ಯತೆಯಿಂದ ಇದ್ದೆವು, ಜೊತೆ ಜೊತೆಯಲ್ಲಿಯೇ ಊಟ ಮಾಡುತ್ತಿದ್ದೆವು ಮತ್ತು ತಿಂಡಿ ತಿನ್ನುತ್ತಿದ್ದೆವು. ಹೊರಗಡೆ ಹೋಗುವುದಿದ್ದರೆ ಎಲ್ಲರೂ ಜೊತೆ ಜೊತೆಯಲ್ಲಿಯೇ ಹೋಗುತ್ತಿದ್ದೆವು.

5. ದಿಃ 06.02.2022 ರಂದು ಬೆಳಿಗ್ಗೆ 8-30 ಗಂಟೆಗೆ ಹಾಲು ತರಲೆಂದು ನಾನು ಅಂಗಡಿಗೆ ಹೋಗುತ್ತಿದ್ದಾಗ ಚಾ ಸಾ 1 ಲಕ್ಷ್ಮಿ ಸಿಕ್ಕಿ ಮೃತ ಲಕ್ಷ್ಮಿ ಯಾಕೆ ಎದ್ದಿಲ್ಲ ಎಂದು ವಿಚಾರಿಸಿದಾಗ ನನಗೆ ಗೊತ್ತಿಲ್ಲ ನೀನು ಹೋಗಿ ವಿಚಾರಿಸು ಎಂದು ನನಗೆ ತಿಳಿಸಿದಳು.

6. ಲಕ್ಷ್ಮಿಯ ಮನೆಯ ಕಾಂಪೌಂಡ್ ನ ಗೇಟ್ ತೆಗೆದಿತ್ತು. ನಾನು ಗೇಟ್ ನ ಒಳಗಡೆ ಪ್ರವೇಶಿಸಿ ನೋಡಿದಾಗ ಮನೆಯ ಬಾಗಿಲಿಗೆ ಹೊರಗಿನಿಂದ ಚಿಲಕ ಹಾಕಿತ್ತು. ಆ ರೀತಿ ಬಾಗಿಲಿನ ಚಿಲಕವನ್ನು ತೆಗೆದು ಒಳಪ್ರವೇಶಿಸಿದಾಗ ಹಾಲ್ ನಲ್ಲಿ ಯಾರೂ ಇರಲಿಲ್ಲ. ರೂಂ ನ ಒಳಗಡೆ ಹೋಗಿ ನೋಡಿದಾಗ ಅಲ್ಲಿ ಒಂದು ಬೀರು ಇತ್ತು ಅದರ ಬಾಗಿಲನ್ನು ತೆಗೆದು ಬಟ್ಟೆಗಳನ್ನು ಚೆಲ್ಲಾಪಿಲ್ಲಿಯಾಗಿ ಹರಡಲಾಗಿತ್ತು.

7. ನಾನು ನೋಡಿದಾಗ ಲಕ್ಷ್ಮಿ ಆ ರೂಂ ನ ನೆಲದ ಮೇಲೆ ಮಲಗಿದ್ದಂತೆ ಕಂಡು ಬಂತು. ಆಕೆಯ ಕಾಲುಗಳನ್ನು ಅಲ್ಲಾಡಿಸಿ ಎಬ್ಬಿಸಲು ಪ್ರಯತ್ನಪಟ್ಟೆ ಆದರೆ ಲಕ್ಷ್ಮಿ ಎದ್ದೇಳಲಿಲ್ಲ. ನಂತರ ಆಕೆಯ ಮುಖದ ಮೇಲಿದ್ದ ಬೆಡ್‌ಶೀಟ್ ಅನ್ನು ತೆಗೆದೆ. ನಾನು ನೋಡಿದಾಗ ಆಕೆಯ ಹಣೆಯ ಮೇಲೆ ಗಾಯವಿತ್ತು ಮತ್ತು ಮುಖದ ಮೇಲೆಲ್ಲಾ ರಕ್ತವಿತ್ತು.

8. ನಾನು ತುಂಬಾ ಜೋರಾಗಿ ಚೀರಾಡುತ್ತಾ ಮನೆಯಿಂದ ಹೊರಗೆ ಬಂದು ಚಾ ಸಾ 1 ರವರ ಮನೆಗೆ ಹೋಗಿ ಲಕ್ಷ್ಮಿಗೆ ಗಾಯವಾಗಿದೆ ನೋಡು ನೋಡು ಎಂದು ಹೇಳಿದೆ. ಆನಂತರದಲ್ಲಿ ನಾನು ಮತ್ತು ಚಾ ಸಾ 1 ಲಕ್ಷ್ಮಿ ಜೊತೆಯಲ್ಲಿಯೇ ಮೃತ ಲಕ್ಷ್ಮಿಯ ಮನೆಗೆ ಹೋದೆವು.

9. ನಾವು ರೂಂ ಗೆ ಪ್ರವೇಶಿಸಿ ನೋಡಿದಾಗ ಲಕ್ಷ್ಮಿ, ಲಕ್ಷ್ಮಿಯ ಪಕ್ಕಕ್ಕೆ ರಾಜು, ಆತನ ಪಕ್ಕಕ್ಕೆ ಕೋಮಲ್ ಮತ್ತು ಕುನಾಲ್ ಅನುಕ್ರಮವಾಗಿ ಮಲಗಿದ್ದರು. ಅವರ ಮೇಲೆಯೂ ಬೆಡ್‌ಶೀಟ್ ಗಳನ್ನು ಹಾಕಲಾಗಿತ್ತು.

10. ಅವರ ಮೇಲೆ ಹಾಕಲಾಗಿದ್ದ ಬೆಡ್ ಶೀಟ್ ಗಳನ್ನು ತೆಗೆದು ನೋಡಿದಾಗ ಅವರೆಲ್ಲರ ಮುಖದ ಮೇಲೆಯೂ ಗಾಯಗಳಿದ್ದವು. ಮುಖದ ಮೇಲೆಲ್ಲಾ ರಕ್ತವಾಗಿತ್ತು. ಆ ನಾಲ್ಕು ಜನರನ್ನು ಹೊರತುಪಡಿಸಿ ಮಂಚದ ಮೇಲೆ ಗೋವಿಂದ ಮಲಗಿದ್ದ. ಗೋವಿಂದನ

ಮುಖ ಮತ್ತು ತಲೆಯ ಬಾಗದಲ್ಲೂ ಕೂಡ ಏಟಾಗಿ ಮುಖದ ಮೇಲೆಲ್ಲಾ ರಕ್ತವಾಗಿತ್ತು.

11. ನಾವು ನೋಡಿದಾಗ ಲಕ್ಷ್ಮಿ ಮತ್ತು ನಾಲ್ಕು ಜನ ಮಕ್ಕಳು ಮೃತಪಟ್ಟಿದ್ದರು. ಆನಂತರದಲ್ಲಿ ಚಾ ಸಾ 1 ಲಕ್ಷ್ಮಿ ಪೊಲೀಸರಿಗೆ ಪೋನ್ ಮಾಡಿದಳು. ನಾವೆಲ್ಲರೂ ನಮ್ಮ ನಮ್ಮ ಸಂಬಂಧಿಕರಿಗೂ ಪೋನ್ ಮಾಡಿ ವಿಚಾರ ತಿಳಿಸಿದೆವು.

12. ಆ ಸಂದರ್ಭದಲ್ಲಿ ಮೃತ ಲಕ್ಷ್ಮಿಯ ಗಂಡ ಗಂಗಾರಾಮ್ ವ್ಯಾಪಾರಕ್ಕೆಂದು ಹೊರಗೆ ಹೋಗಿದ್ದ. ಸದರಿ ಗಂಗಾರಾಮ್ ನಿಗೂ ಕೂಡ ವರ್ತಮಾನ ಕೊಟ್ಟೆವು.

13. ಸಂಜೆಯ ಸಮಯುದಲ್ಲಿ ಗಂಗಾರಾಮ್, ಆತನ ತಾಯಿ, ಸಹೋದರ ಎಲ್ಲರೂ ಗಾಂಗಾರಾಮ್ ನ ಮನೆಗೆ ಬಂದರು. ಆ ರೀತಿ ಲಕ್ಷ್ಮಿ ಮತ್ತು ನಾಲ್ಕು ಜನ ಮಕ್ಕಳು ಕೊಲೆಯಾಗಿರುವ ವಿಚಾರವನ್ನು ನಾವು ಮೊದಲೇ ಗಂಗಾರಾಮ್ ಗೆ ಪೋನ್ ಮಾಡಿ ತಿಳಿಸಿದ್ದೆವು.

14. ಮೃತ ಲಕ್ಷ್ಮಿಯ ಗಂಡ ಗಂಗಾರಾಮ್ ನ ಜೊತೆಯಲ್ಲಿ ಆರೋಪಿ ಲಕ್ಷ್ಮಿಗೆ ಅಕ್ರಮ ಸಂಬಂಧವಿದ್ದ ವಿಚಾರ ಪೋಲೀಸರಿಂದ ಗೊತ್ತಾಯಿತು. ಗಂಗಾರಾಮ್ ನ ಜೊತೆಯಲ್ಲಿ ಅಕ್ರಮ ಸಂಬಂಧ ಇದ್ದುದರಿಂದ ಗಂಗಾರಾಮ್ ನ ಹೆಂಡತಿ ಲಕ್ಷ್ಮಿ ಮತ್ತು ನಾಲ್ಕು ಜನ ಮಕ್ಕಳನ್ನು ಮಚ್ಚು ಮತ್ತು ಸುತ್ತಿಗೆಯಿಂದ ಹೊಡೆದು ಸಾಯಿಸಿದ್ದಾಳೆ

ಎಂಬ ವಿಚಾರ ಪೊಲೀಸರಿಂದ ಗೊತ್ತಾಯಿತು. ಆ ರೀತಿ ಮಚ್ಚು ಮತ್ತು ಸುತ್ತಿಗೆಯಿಂದ ಹೊಡೆದು ಸಾಯಿಸಿದ್ದೇನೆ ಎಂದು ಆರೋಪಿ ಲಕ್ಷ್ಮಿ ತಿಳಿಸಿದ್ದರಿಂದ ಪೊಲೀಸರಿಗೆ ಗೊತ್ತಾಗಿದೆ.

15. ಆರೋಪಿ ಲಕ್ಷ್ಮಿಯನ್ನು ನೋಡಿದರೆ ಗುರುತಿಸುತ್ತೇನೆ. (ಈ ಹಂತದಲ್ಲಿ WhatsApp vedio call ಮುಖಾಂತರ ಆರೋಪಿಯನ್ನು ಸಾಕ್ಷಿಗೆ ತೋರಿಸಲಾಯಿತು ಮತ್ತು ಸಾಕ್ಷಿಯು ವಿಡಿಯೋ ಕಾಲ್ ಮುಖಾಂತರ ನೋಡಿಕೊಂಡು ಆರೋಪಿಯನ್ನು ಗುರುತಿಸಿರುತ್ತಾರೆ.)

16. ಆ ದಿವಸ ಆರೋಪಿ ಲಕ್ಷ್ಮಿಯೂ ಕೂಡ ಮೃತ ಲಕ್ಷ್ಮಿಯ ಮನೆಗೆ ಬಂದು ಐದು ಜನರ ಶವವನ್ನು ನೋಡಿಕೊಂಡು ಹೋಗಿರುತ್ತಾಳೆ.

17. ಆನಂತರದಲ್ಲಿ ಐದು ಜನರ ಶವವನ್ನು ಶವ ಪರೀಕ್ಷೆಗಾಗಿ ಶವವನ್ನು ಪೊಲೀಸರು ಮೈಸೂರಿಗೆ ತೆಗೆದುಕೊಂಡು ಹೋಗಿರುತ್ತಾರೆ.

**<u>ಪಾಟೀ ಸವಾಲುಃ ಮುಂದೂಡಿದೆ.</u>**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)

**ಪಾಟೀ ಸವಾಲುಃ ಕಲಂ 231(2) ರಲ್ಲಿ ಮಾಡಿದ ಆದೇಶದ ಪ್ರಕಾರ ಪಾಟೀ ಸವಾಲನ್ನು ಮುಂದೂಡಿದೆ.**